

# ನಕ್ಕುಬಿಡಿ



ಶಂಕರಪ್ಪ ಜೋತಿಷಿ ಬಳಿ ಬಂದು ಜಾತಕ ತೋರಿಸಿದ. ಜಾತಕವನ್ನು ನೋಡಿ ಲೆಕ್ಕಾಚಾರ ಹಾಕಿದ ಜೋತಿಷಿ:

'ನಿನಗೆ ಆರನೇ ಮನೆಯಲ್ಲಿ ರಾಹು ಮತ್ತು ಏಳನೇ ಮನೆಯಲ್ಲಿ ಕೇತು ಇದ್ದಾನೆ' ಎಂದ

ಶಂಕರಪ್ಪ: ತಕ್ಷಣ ಹೇಳಿದ... ಆರು ಮತ್ತು ಏಳನೇ ಮನೆಯಲ್ಲಿರುವ ರಾಹು – ಕೇತು ಬಿಟ್ಟಾಕಿ... ನಮ್ಮ ಮನೆಯಲ್ಲಿ ರಾಹು – ಕೇತು ಇದ್ದಾರಾ ಒಸಿ ನೋಡಿ ಹೇಳಿ ಸ್ವಾಮಿ?

★★★

**ಮನೆ**

ನೆಂಟರು ಬಂದಾಗ ಸಣ್ಣದು ಎನಿಸುತ್ತದೆ.

ಪೊರಕೆ ಹಿಡಿದು ಗುಡಿಸುವಾಗ ಮತ್ತು ಬ್ರಷ್ ಹಿಡಿದು ಗೋಡೆಗೆ ಪೇಂಟ್ ಮಾಡುವಾಗ ದೊಡ್ಡದಾಗಿ ಕಾಣುತ್ತದೆ!

★★★

ತಂದೆ: 'ಮನೆ ಇಷ್ಟೇಕೆ ಕ್ಲೀನ್ ಆಗಿದೆ?'

ಮಗ: ನನ್ನ ಐಫೋನ್ ಚಾರ್ಜರ್ ಕಳೆದುಹೋಗಿದ್ದು, ಅದನ್ನು ಹುಡುಕುತ್ತಿದ್ದೆ.

**(ಸಂಗ್ರಹ) ಡಾ.ಅನಿಕೇತ್ ಶರ್ಮಾ, ಬೆಂಗಳೂರು**



ಗುಂಡ: ನನ್ನ ಕ್ರೆಡಿಟ್ ಕಾರ್ಡ್ ಕಳೆದು ಹೋಗಿದೆ

ರಾಮು: ಪೊಲೀಸ್ ಕಂಪ್ಲೆಂಟ್ ಕೊಟ್ಟೆಯಾ?

ಗುಂಡ: ಇಲ್ಲ ಕಣೋ

ರಾಮು: ಯಾಕೆ? ಈಗ್ಲೇ ಕಂಪ್ಲೆಂಟ್ ಕೊಟ್ಟುಬಿಡು.

ಗುಂಡ: ಹೋಗ್ಲಿ ಬಿಡು... ಹೇಗಿದ್ದರೂ ಕಳ್ಳ ನನ್ನ ಹೆಂಡತಿಗಿಂತ ಕಡಿಮೆಯೇ ಖರ್ಚು ಮಾಡುತ್ತಿದ್ದಾನೆ!

★★★

ಆಸ್ಪತ್ರೆ ತಲುಪಿದ ಗುಂಡನ ತಲೆಯಿಂದ ರಕ್ತ ಸುರಿಯುತ್ತಿತ್ತು.

ನರ್ಸ್: ನಿನ್ನ ಹೆಸರು?

ಗುಂಡ: ಗುಂಡ

ನರ್ಸ್: ವಯಸ್ಸು?

ಗುಂಡ: 28 ವರ್ಷ

ನರ್ಸ್: ಮದುವೆ ಆಗಿದೆಯಾ...

ಗುಂಡ: ಇಲ್ಲ, ಇದು ಅಪಘಾತದಿಂದಾದದ್ದು!

★★★

ಆಷಾಢಕ್ಕೆ ಗುಂಡನ ಹೆಂಡತಿ ತವರಿಗೆ ಹೋಗಿದ್ದಾಗ ಸಾಂಬಾರು ಮಾಡುವ ಬಗ್ಗೆ ಫೋನಿನಲ್ಲಿ ಗುಂಡನಿಗೆ ಮಾಹಿತಿಯನ್ನು ನೀಡುತ್ತಿದ್ದಳು.

ಎಲ್ಲಾ ಮುಗಿದ ಬಳಿಕ ಗುಂಡ ಪುನಃ ಫೋನಾಯಿಸಿ ವಿಚಾರಿಸಿದ, 'ಸಾಂಬಾರಿಗೆ ತಲೆಕೂದಲು ಹಾಕುವುದು ಯಾವಾಗ...?'

★★★

ಆರ್ಥೋಪಿಡಿಯನ್ ಡಾಕ್ಟರ್: ಈಗ ನೀನು ನಡೆಯಬಲ್ಲೆ, ಆದರೆ ಸಹಾಯಕ್ಕಾಗಿ ಒಂದು ವಾಕರ್ ಕೊಳ್ಳಬೇಕಾಗುತ್ತದೆ.

ಸಂತಾ: (ಖುಷಿಯಿಂದ) ಸರಿ ಡಾಕ್ಟರ್ ಸಾಹೇಬರೇ, ಜಾನಿವಾಕರ್ ಆಗಬಹುದು ತಾನೇ...!?

★★★

12 ವರ್ಷಗಳ ನಂತರ ಆತನಿಗೆ ಜೈಲಿನಿಂದ ಬಿಡುಗಡೆ ಸಿಕ್ಕಿತು. ಮಲಿನ ಬಟ್ಟೆಗಳೊಂದಿಗೆ ಬಳಲಿದ ಆತ ಮನೆಗೆ ತಲುಪಿದ. ಹೆಂಡತಿ ಕೇಳಿದಳು, 'ಇಷ್ಟು ಹೊತ್ತು ಎಲ್ಲಿ ಅಲೆದಾಡುತ್ತಿದ್ದೆ... ಬಿಡುಗಡೆಯಾಗಿ ಎರಡು ಗಂಟೆಯಾಯಿತು?'

**(ಸಂಗ್ರಹ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ**



ASHTAVAIDYAN THAIKKATTU MOOSS
VAIDYARATNAM
SINCE 1941
ವೈದ್ಯರತ್ನಂ
ಹರ್ಬಲ್
ಸಾಬೂನು




ವೈದ್ಯರತ್ನಂ ಔಷಧ ಮಳಿಗೆಗಳಲ್ಲಿ ದೊರೆಯುತ್ತದೆ




VAIDYARATNAM
OUSHADHASALA PVT. LTD.
ಕೇಂದ್ರ ಕಛೇರಿ: ಒಲ್ಲೂರು, ತೈಕಾಡುಶೇರಿ, ತ್ರಿಶ್ಯೂರ್,
ಕೇರಳ–680306, ದೂರವಾಣಿ: +91–487 2432732
Web: www.vaidyaratnammooss.com,
E-commerce: www.keralaayurvedamedicine.com

ಬೆಂಗಳೂರು ಟ್ರೀಟ್‌ಮೆಂಟ್ ಸೆಂಟರ್: ನಂ. 2335, 17ನೇ ಕ್ರಾಸ್, 24ನೇ ಮೈನ್, ಸೆಕ್ಟರ್–1, ಹೆಚ್.ಎಸ್.ಆರ್. ಲೇ–ಔಟ್, ಬೆಂಗಳೂರು – 560 102. ಫೋನ್: 080–22580020

ನಮ್ಮ ಆಯುರ್ವೇದ ಔಷಧಿಗಳ ಡೀಲರ್‌ಶಿಪ್ ಮಾಹಿತಿಗೆ ಸಂಪರ್ಕಿಸಿ: 0–98863 21936

ಬದಲಾಗುವ ಕಾಲಗಳಿಗೆ, ಸತ್ವಹೀನವಾಗದ ಅಷ್ಟವೈದ್ಯ ಆಯುರ್ವೇದ ಪದ್ಧತಿ